ಮತ್ತೂ ಯಾರೂ ಒಡೆಯಲಾಗದಂತ ಸೇಫ್ ಎಂದೇ ಪರಿಗಣಿತವಾಗಿತ್ತು. ಸೇಫಿಂದ ಕೇವಲ ಒಂದೂವರೆ ಸಾವಿರ ಡಾಲರ್‌ಗಳನ್ನು ಎತ್ತಿಕೊಂಡಿದ್ದರು. ಕಾಗದ ಪತ್ರಗಳನ್ನು ಮುಟ್ಟಿರಲಿಲ್ಲ. ಈಗ ನಿಜಕ್ಕೂ ಪೊಲೀಸ್ ಡಿಪಾರ್ಟ್‌ಮೆಂಟಿನಲ್ಲಿ ಸಂಚಲನ ಶುರುವಾಯ್ತು. ನಂತರ ಜೆಫರ್ಸನ್ ಸಿಟಿಯಲ್ಲಿ ಪುರಾತನ ಸೇಫೊಂದನ್ನು ತೆರೆದು ಐದು ಸಾವಿರ ಡಾಲರುಗಳನ್ನು ದೋಚಿದರು. ಈಗ ಡಿಟೆಕ್ಟಿವ್ ಬೆನ್ ಪ್ರೈಸ್ ರಂಗ ಪ್ರವೇಶಿಸುವುದು ಅನಿವಾರ್ಯವಾಯ್ತು. ಬೆನ್ ಪ್ರೈಸನಿಗೆ ಈ ಮೂರೂ ಪ್ರಕರಣಗಳಲ್ಲಿ ಸಾಮ್ಯತೆ ಕಂಡಿತು. ಅವನು ಲೂಟಿಯಾದ ಸ್ಥಳಗಳಿಗೆ ಭೇಟಿ ಕೊಟ್ಟ.

ಈ ಮೂರೂ ಪ್ರಕರಣಗಳೂ ಜಿಮ್ ವ್ಯಾಲೆಂಟಿನನ ಕೃತ್ಯಗಳೆಂಬುದರಲ್ಲಿ ಅವನಿಗೆ ಯಾವುದೇ ಸಂಶಯವಿರಲಿಲ್ಲ. 'ಇದು ಖಂಡಿತವಾಗಿಯೂ ಅವನದೇ ಹಸ್ತಾಕ್ಷರ. ಅವನು ಮತ್ತೆ ದಂಧೆಗಿಳಿದಿರುವಂತೆ ಕಾಣಿಸುತ್ತದೆ. ಕಾಂಬಿನೇಶನ್ ಲಾಕ್ ಇರುವ ತಿಜೋರಿಯನ್ನೇ ಒಮ್ಮೆ ನೋಡಿ! ಮೆದು ಮಣ್ಣಿನಿಂದ ಗೆಣಸು ಕೀಳುವಷ್ಟು ಸಲೀಸಾಗಿ ಎತ್ತಿದ್ದಾನೆ! ಈ ಕೃತ್ಯಕ್ಕೆ ಬೇಕಾಗಿರುವಂತ ಹತ್ಯಾರಗಳು ಅವನನ್ನು ಬಿಟ್ಟರೆ ಮತ್ತ್ಯಾರಲ್ಲೂ ಇಲ್ಲ. ಅವನ ಕೆಲಸ ಎಷ್ಟೊಂದು ನಾಜೂಕೆಂದರೆ, ನಿಜಕ್ಕೂ ಅವನೊಬ್ಬ ಕಲಾವಿದ! ಅವನನ್ನು ನನಗೆ ಬಿಡಿ. ಮುಂದಿನ ಸಲ ಅವನು ಜೈಲಿನಿಂದ ಇಷ್ಟೊಂದು ಸುಲಭವಾಗಿ ಹೊರಬರದಂತೆ ನಾನು ನೋಡಿಕೊಳ್ಳುತ್ತೇನೆ. ಇನ್ನು ಅವನ ಪಾಲಿಗೆ ಕ್ಷಮಾಪಣೆ ಗಿಮಾಪಣೆ ಎಲ್ಲಾ ಮುಗಿದ ಅಧ್ಯಾಯ.' ಅವನು ತನ್ನ ಮೇಲಧಿಕಾರಿಗಳಿಗೆ ಹೇಳತೊಡಗಿದ.

ಜಿಮ್ ವ್ಯಾಲೆಂಟಿನನ ಕಾರ್ಯವಿಧಾನ ಅವನಿಗೆ ಚೆನ್ನಾಗಿ ಗೊತ್ತಿತ್ತು. ಸ್ಪ್ರಿಂಗ್‌ಫೀಲ್ಡ್ ಪ್ರಕರಣದಿಂದಾಗಿ ಬೆನ್‌ಪ್ರೈಸನಿಗೆ ಜಿಮ್ಮಿಯ ಪರಿಚಯವಾಗಿತ್ತು. ಏಕಾಂಗಿ, ಕುಟುಕು ಕಾರ್ಯಾಚರಣೆ, ದೊಡ್ಡ ದೊಡ್ಡ ಮನುಷ್ಯರ ಪರಿಚಯ, ಮೇಲ್ದರ್ಜೆಯ ಅಭಿರುಚಿಗಳು ಅವನನ್ನು ಇತರರಿಂದ ಭಿನ್ನನನ್ನಾಗಿಸಿದ್ದವು. ಬೆನ್‌ಪ್ರೈಸನಿಗೂ ಡಿಪಾರ್ಟ್‌ಮೆಂಟಿನಲ್ಲಿ ಒಳ್ಳೆಯ ಹೆಸರಿತ್ತು. ಒಂದು ಕೇಸನ್ನು ಅವನಿಗೆ ಒಪ್ಪಿಸಿದರೆಂದರೆ ತಿಜೋರಿ ಇಟ್ಟವರು ನೆಮ್ಮದಿಯ ಉಸಿರು ಬಿಡಬಹುದಿತ್ತು.

ಒಂದು ಮಟಮಟ ಮಧ್ಯಾಹ್ನ ಜಿಮ್ಮಿ ವ್ಯಾಲೆಂಟಿನ್ ತನ್ನ ಸೂಟ್‌ಕೇಸಿನೊಂದಿಗೆ ಅರ್ಕಾನ್ಸಸ್ ಪ್ರಾಂತ್ಯದ ಎಲ್ಮೋರ್ ನಗರಕ್ಕೆ ಬಂದಿಳಿದ. ಅವನು ಆಗತಾನೆ ಕಾಲೇಜಿನಿಂದ ರಜೆಯಲ್ಲಿ ಮನೆಗೆ ಹೊರಟಿರುವ ಯುವಕನಂತೆ ಕಾಣಿಸುತ್ತಿದ್ದ. ರಸ್ತೆಯಲ್ಲಿ ಒಬ್ಬಳು ಸುಂದರ ಯುವತಿ ಅವನಿಗೆ ಅಡ್ಡ ಹಾದು ಹೋದಳು. ಅವನು ಸಹಜ ಕುತೂಹಲದಿಂದ ಅವಳನ್ನೇ ತುಸು ಹೊತ್ತು ಗಮನಿಸಿದ. ಆಕೆ, 'ಎಲ್ಮೋರ್ ಬ್ಯಾಂಕ್' ಎಂದು ಬರೆದಿದ್ದ ಕಟ್ಟಡದ ಮುಖ್ಯ ದ್ವಾರದ ಬಳಿ ಹೋಗಿ ನಿಂತಳು. ಅವನು ಅವಳನ್ನು ನೋಡುವುದಕ್ಕೂ, ಆಕೆಯೂ ಅವನನ್ನು ನೋಡುವುದಕ್ಕೂ ಸರಿಯಾಯಿತು. ಆ ಒಂದು ಕ್ಷಣದಲ್ಲಿ ಜಿಮ್ಮಿ, ತಾನು ಯಾರೆಂಬುದನ್ನೇ ಮರೆತು ರೂಪಾಂತರಗೊಂಡ. ಆಕೆ ಒಮ್ಮೆಲೇ ದೃಷ್ಟಿ ಕೆಳಗೆ ಹಾಯಿಸಿ ಒಳಗೆ ಹೋದಳು. ಅವಳ ಕೆನ್ನೆಗಳು ರಂಗೇರಿದ್ದನ್ನು ಜಿಮ್ಮಿ ಗಮನಿಸದೇ ಇರಲಿಲ್ಲ. ಬ್ಯಾಂಕಿನ ಮೆಟ್ಟಿಲುಗಳ ಮೇಲೆ ಆಡುತ್ತಿದ್ದ ಒಬ್ಬ ಹುಡುಗನನ್ನು ಕರೆದು ಜಿಮ್ಮಿ ಆ ಊರಿನ ಬಗ್ಗೆ ವಿಚಾರಿಸಿಕೊಳ್ಳತೊಡಗಿದ. ಅಷ್ಟರಲ್ಲೇ ಆ ಹುಡುಗಿ ಹೊರಬಂದು ಜಿಮ್ಮಿಯನ್ನು ಗಮನಿಸದೆಯೇ ಹೊರಟುಹೋದಳು.

'ಆಕೆ ಮಿಸ್ಸ್ ಪಾಲಿ ಸಿಂಪ್ಸನ್ ಅಲ್ಲವೇ?' ಜಿಮ್ಮಿ ಹುಡುಗನನ್ನು ಕೇಳಿದ.

'ಹೇ...' ಹುಡುಗ ನಗೆಯಾಡಿದ. 'ಅವಳು ಅನ್ನಾಬೆಲ್ ಆಡಾಮ್ಸ್. ಆ ಬ್ಯಾಂಕು ಅವಳ